ಅಸಲು ದಾವಾ ಸಂಖ್ಯೆ: 974/2017

**ಪಿ.ಡಬ್ಲ್ಯೂ-2**

**ದಿಃ 04-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ CSH ವಕೀಲರಿಂದ**

ನನಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯದ ಬಗ್ಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ವಾದಿಯರು ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂದು ನನಗೆ ಗೊತ್ತು. ನನಗೆ ದಾವಾ ಸ್ವತ್ತಿನ ಆಸ್ತಿ ನಂಬರ ಗೊತ್ತಿಲ್ಲ. ದಾವಾ ಆಸ್ತಿಯು 1 ನೇ ವಾದಿ ಹಾಗೂ 2 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು 1 ನೇ ವಾದಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಉದ್ದ ಅಗಲ ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು 20 ಅಡಿ ಅಗಲ ಹಾಗೂ 40 ಅಡಿ ಉದ್ದ ಇರಬಹುದು ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು ದಾವಾ ಆಸ್ತಿಯು 20 ಅಡಿ ಅಗಲ ಹಾಗೂ 300 ಅಡಿ ಉದ್ದ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು 20 ಅಡಿ ಅಗಲ ಹಾಗೂ 40 ಅಡಿ ಉದ್ದ ಇರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮನೆಯ ಉತ್ತರಕ್ಕೆ ಖಾಲ್ಲಾ ಜಾಗ ಇರುತ್ತದೆ ಎಂದರೆ ಸರಿ. ಅದರ ಬಾಜುವಿಗೆ ಶಿವಾಜಿ ಹುಲಕ್ಯೆ ರವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ಅವರ ಜಾಗ ಇಲ್ಲದಿದ್ದರೂ ಬಲವಂತವಾಗಿ ಅದನ್ನು ಕಟ್ಟುತ್ತಿದ್ದಾರೆ ಎಂದು ನುಡಿಯುತ್ತಾರೆ. 2017 ನೇ ಇಸ್ವಿಯಲ್ಲಿ ವಾದಿಯರು ಸದರಿ ಶಿವಾಜಿ ಹುಲಕ್ಯೆ ರವರು ಕಟ್ಟುತ್ತಿರುವ ಮನೆಯ ಬಗ್ಗೆ ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಶಿವಾಜಿ ಹುಲಕ್ಯೆ ರವರು ಜಗಳ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ವಾದಿ ನನ್ನ ಮನೆಯ ನೆರೆಕೆರೆಯವರು. ದಾವಾ ಸ್ವತ್ತಿನ ಆಸ್ತಿಯು ಗ್ರಾಮಠಾಣಾ ಆಗಿರುತ್ತದೆ ಎಂದರೆ ಸರಿ. ಗ್ರಾಮಠಾಣಾದಲ್ಲಿ ಬರುವ ಆಸ್ತಿಯ ಉತಾರ ಅಷ್ಟೇ ಪಂಚಾಯಿತಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮನೆ ಹಾಗೂ ಖುಲ್ಲಾ ಜಾಗ ಇರುವ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು 1 ನೇ

ವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ. 1(ಎ) ಪ್ರತಿವಾದಿ ಶಿವಾಜಿ ನಾಗಪ್ಪ ಹುಲಕೈ ರವರು 2007 ರಲ್ಲಿ ಸರ್ಕಾರದ ಆಶ್ರಯ ಯೋಜನೆ ಅಡಿಯಲ್ಲಿ ತಮಗೆ ಮಂಜೂರಾದ ಜಾಗೆಯಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರ ಹೆಸರಿನಲ್ಲಿ ಆ ಜಾಗೆಯು ಇರುವುದಿಲ್ಲ, ಸದರಿಯವರು ಬಲವಂತವಾಗಿ ಅದನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಶಿವಾಜಿ ರವರು ಕಟ್ಟಿದ ಮನೆಯು ಎಷ್ಟು ಉದ್ದ ಅಗಲ ಇರುತ್ತದೆ ಎಂದರೆ ಸಾಕ್ಷಿಯು 30 ಅಡಿ ಉದ್ದ ಹಾಗೂ 20 ಅಡಿ ಅಗಲ ಇರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಸುಳ್ಳು ಹಾಗೂ ವಾದಿಯರು ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳೂ ಸಹ ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

2. ಬೆಳಗಾವಿಯ 3 ನೇ ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ಸಿಸಿ ನಂ.83/2022 ರಲ್ಲಿ ವಾದಿಯರ ಹಾಗೂ ಮೃತ ಶ್ರೀಮತಿ ಪಾರ್ವತಿದಾರರ ವಾರಸುದಾರರಾದ 1(ಎ) ರಿಂದ 1(ಡಿ) ಪ್ರತಿವಾದಿಯರ ನಡುವೆ ಕ್ರಿಮಿನಲ್ ಪ್ರಕರಣ ಇದ್ದು, ಅದು ರಾಜಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಿಸಿ ನಂ.194/2018 ರಲ್ಲಿ ವಾದಿಯರ ಹಾಗೂ ಮೃತ ಶ್ರೀಮತಿ ಪಾರ್ವತಿದಾರರ ವಾರಸುದಾರರಾದ 1(ಎ) ರಿಂದ 1(ಡಿ) ಪ್ರತಿವಾದಿಯರ ನಡುವೆ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಇದ್ದು, ಅದು ಸಹ ರಾಜಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣವು ಈ ಕೇಸಿಗೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿ ಹಾಗೂ 2 ನೇ ಪ್ರತಿವಾದಿಯ ನಡುವೆ ವಿಭಾಗ ಕೋರಿ FDP ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಕೇಸಿನ ಆದೇಶ ಆದ ನಂತರ ವಾದಿಯರು ಈ ದಾವೆಯನ್ನು ಹಾಕಬೇಕಾಗಿತ್ತು ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವುದೇ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ 974/2017

**ಪಿ.ಡಬ್ಲ್ಯೂ-2**

3. ಗುರದೈವಗೋಳ ಓಣಿ, ಆಸ್ತಿ ನಂ.140/ಎ ರಲ್ಲಿನ 20*42 ಮನೆ ಕಟ್ಟಿರುವ ಉತಾರೆಯನ್ನು ಅಷ್ಟೇ 1 ನೇ ವಾದಿಯು ಈ ದಾವೆಯಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಖುಲ್ಲಾ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಖುಲ್ಲಾ ಜಾಗ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಿಯ ವಕೀಲರು ಅದರ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಾತ್ ನಕಾಶೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿಯಲ್ಲಿ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ವಾದಿಯರು ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆಯೇ ಎಂದರೆ ಸಾಕ್ಷಿಯು ವಾದಿಯರು ವಕೀಲರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆ ರೀತಿಯಾಗಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ ಸದರಿ ಆಸ್ತಿ ಅವರದೆಂದು, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿ ನಂ.140 ಹಾಗೂ 140/ಎ ರ ಬೇರೆ ಬೇರೆ ಉತಾರಗಳು ಇರುತ್ತವೆ ಎಂದರೆ ಸಾಕ್ಷಿಯು ಒಂದೇ ಇದ್ದು, ಅದು 1 ನೇ ವಾದಿಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಗುರದೈವಗೋಳ ಓಣಿ, ಆಸ್ತಿ ನಂ.140/ಎ ರಲ್ಲಿನ 20*42 ಅಡಿ, 840 ಚದರ ಅಡಿ ಒಳಗಿನ 3 ಅಡಿ ಪ್ಯಾಸೇಜ್ ನ್ನು ಮೃತ 1 ನೇ ಪ್ರತಿವಾದಿ ಹಾಗೂ ಈಗ ಸದರಿಯವರ ವಾರಸುದಾರರು ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೃತ 1 ನೇ ಪ್ರತಿವಾದಿಯು ಬಲವಂತವಾಗಿ ಅವರ ಹೆಸರಿನಲ್ಲಿ ಜಾಗೆ ಇಲ್ಲದಿದ್ದರೂ ಮನೆಯನ್ನು ಕಟ್ಟಿ ಅವರಿಗೆ ಬೇಕಾದಾಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ22.01.2007 ರಂದು ಮೃತ 1 ನೇ ಪ್ರತಿವಾದಿ ರವರಿಗೆ ಬೆಳಗಾವಿಯ ಸಬ್ ರಜಿಸ್ಟರ್ ಮೂಲಕ ಆಶ್ರಯ ಯೋಜನೆ ಅಡಿಯಲ್ಲಿ ರೂ.20,000/- ಮಂಜೂರು ಆಗಿದ್ದು, ಸದರಿಯವರು ಮನೆ ಕಟ್ಟಿರುತ್ತಾರೆ

ಎಂದರೆ ಸಾಕ್ಷಿಯು ಸದರಿಯವರ ಹೆಸರಿಗೆ ಯಾವುದೇ ಮಂಜೂರಾತಿ ಆಗಿರಲಿಲ್ಲ, 1 ನೇ ವಾದಿಯ ಹೆಸರಿಗೆ ಆಗಿತ್ತು ಎಂದು ನುಡಿಯುತ್ತಾರೆ. ನಾನು 1 ನೇ ವಾದಿಗೆ ಹೆಚ್ಚಿನ ಆಸ್ತಿ ಸಿಗಲಿ ಎಂದು ಅವರ ಪರವಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**